**OS: 115-15** **PW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 23.08.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮೂರನೇ ಪ್ರತಿವಾದಿಗಳು ಹಾಗೂ ಅವರ ಪರ ವಕೀಲರು ಗೈರು ಹಾಜರು, ಆ ಕಾರಣ ಅವರ ಪರವಾಗಿ ಪಾಟೀ ಸವಾಲು ಏನೂ ಇಲ್ಲವೆಂದು ತೆಗೆದುಕೊಳ್ಳಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 4 ರಿಂದ 6 ಪರ ಶ್ರೀ ಎಸ್ ಆರ್ ಜಿ ವಕೀಲರಿಂದ ಃ**

ದಾವಾ ಆಸ್ತಿಯ ನಂಃ 95/06 ಇದೆ ಅದರ ಕ್ಷೇತ್ರ 2 ಎಕರೆ ಇದೆ. ಆ ಆಸ್ತಿ ಮೂಲತಃ ನಮ್ಮ ಮುತ್ತಜ್ಜ ಗೆದ್ದನಗೌಡ ಅಂದರೆ ನನ್ನ ಅಜ್ಜ ಸಿದ್ದನಗೌಡನ ತಂದೆಯ ಆಸ್ತಿ. 1 ನೇ ಪ್ರತಿವಾದಿ ನನ್ನ ದೊಡ್ಡಪ್ಪ, ಎರಡನೇ ಪ್ರತಿವಾದಿ ನನ್ನ ತಂದೆ. ಅದರ ಕ್ಷೇತ್ರ ಮೊದಲಿನಿಂದಲೂ 2 ಎಕರೆ ಮಾತ್ರ ಇದೆ. ನನ್ನ ಅಜ್ಜ ಸಿದ್ದನಗೌಡನ ಜೀವಿತ ಅವಧಿಯಲ್ಲಿಯೇ ನನ್ನ ತಂದೆ ಮತ್ತು ನಮ್ಮ ದೊಡ್ಡಪ್ಪ ಬೇರೆ ಬೇರೆ ವಾಸವಾಗಿದ್ದರು. ನನ್ನ ಮದುವೆ 2009 ರಲ್ಲಿ ಆಗಿದೆ. ನನ್ನ ಮದುವೆಯಾಗುವ ಮೊದಲು ನಾನು, ನನ್ನ ಸಹೋದರರು ಅಂದರೆ ರುದ್ರಗೌಡ, ವಿರಭದ್ರಗೌಡ ಮತ್ತು ಗಿರೀಶಗೌಡ ವಾದಿ 5 ರಿಂದ 7 ಮತ್ತು ನಮ್ಮ ಅಜ್ಜಿ ಬಸವ್ವ ಕೂಡಿಕೊಂಡು ಇದ್ದೆವು. ನಾನು 10 ನೇ ತರಗತಿವರೆಗೆ ಓದಿದ್ದೇನೆ. ನನ್ನ ಸಹೋದರರು 5 ನೇ ವಾದಿ 6 ನೇ ತರಗತಿ, 6 ನೇ ವಾದಿ 10 ನೇ ತರಗತಿ, 7 ನೇ ವಾದಿ 9 ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದಾರೆ. ಅವರ ಪೈಕಿ ನನ್ನ ಹಾಗೂ 5 ನೇ ವಾದಿ ರುದ್ರಗೌಡನ ಮದುವೆಯಾಗಿದೆ. ನಮ್ಮ ಮದುವೆಯನ್ನು ನಮ್ಮ ತಂದೆ ಮಲ್ಲನಗೌಡ ಮಾಡಿದ್ದಾರೆ. ಅದಕ್ಕೆ ನಮ್ಮ ಕಾಕಾ ಅಂದರೆ ಈಶ್ವರಗೌಡ ಸಹ ಮದುವೆ ಖರ್ಚು ಮಾಡಿದ್ದಾರೆ.

3 ನೇ ವಾದಿ ನನ್ನ ತಾಯಿಯಾಗಬೇಕು. 1 ನೇ ಪ್ರತಿವಾದಿ ನನ್ನ ದೊಡ್ಡಪ್ಪನಾಗಬೇಕು. 8 ನೇ ವಾದಿ ಅವರ ಹೆಂಡತಿಯಾಗಬೇಕು. 9 ರಿಂದ 13 ನೇ ವಾದಿಗಳು ಅವರ ಮಕ್ಕಳು ಆಗಬೇಕು. ಎರಡನೇ ವಾದಿ ಶಾಂತವ್ವ ಇವಳು ನಮ್ಮ ತಂದೆಯ ಸಹೋದರಿಯಾಗಬೇಕು.

**OS: 115-15** **PW-1**

ನಾವು ಎಲ್ಲಾ ವಾದಿಯರು ಮತ್ತು ಒಂದನೇ ಪ್ರತಿವಾದಿ ಮತ್ತು ಎರಡನೇ ಪ್ರತಿವಾದಿ ಕೂಡಿ 4 ನೇ ಪ್ರತಿವಾದಿಗೆ ನಿಪಿ.9 ರ ಪ್ರಕಾರ ನೋಂದಾಯಿತ ಖರೀದಿ ಪತ್ರ ಮಾಡಿಕೊಟ್ಟಿದ್ದೇವೆ ಅಂದರೆ ಗಜಾನನ ಅಣ್ಣೀಕರ ಎನ್ನುವವರು ನಮಗೆ ಉಪ-ನೋಂದಣಾಧಿಕಾರಿ ಕಚೇರಿಯಲ್ಲಿ ಸಾಲದ ಬಗ್ಗೆ ದಾಖಲೆ ಮಾಡುವುದು ಇದೆ ಎಂದು ಸುಳ್ಳು ಹೇಳಿ ಕರೆದುಕೊಂಡು ಹೋಗಿದ್ದರು ಎಂದು ಸಾಕ್ಷಿಯು ಉತ್ತರಿಸುತ್ತಾರೆ.  ನನಗೆ ಹೆರಿಗೆಯಾಗಿದೆ ಎಂದು ಕಚೇರಿಗೆ ಹೋಗಲು ಆಗುವುದಿಲ್ಲವೆಂದು ತಿಳಿದು ನಾನು ಹಾಗೂ ನಮ್ಮ ತಮ್ಮ ರುದ್ರಗೌಡ ಮತ್ತು ನನ್ನ ಅತ್ತೆ ಬಸವ್ವ ಕುರಬಗಟ್ಟಿ ಎಲ್ಲರೂ ಕೂಡಿ ಮಾರುತಿ ಲಿಂಗಪ್ಪ ರಾಯ್ಕರ ರವರಿಗೆ ಜಿ ಪಿ ಎ ಮಾಡಿಕೊಟ್ಟಿದ್ದೆವು ಮತ್ತು ಖರೀದಿ ಪತ್ರ ಮಾಡಿಕೊಡಲು ಅಧಿಕಾರ ಪತ್ರ ನೀಡಿದ್ದೆವು ಎಂದರೆ ಸರಿಯಲ್ಲ.

ನಾವು ಎಲ್ಲಾ ವಾದಿಯರು ಮತ್ತು ಒಂದನೇ ಪ್ರತಿವಾದಿ ಮತ್ತು ಎರಡನೇ ಪ್ರತಿವಾದಿ ಕೂಡಿ 5 ನೇ ಪ್ರತಿವಾದಿಗೆ ನಿಪಿ.10 ರ ಪ್ರಕಾರ ಸ ನಂಃ 95/6 ರ ಜಮೀನಕ್ಕೆ ಸಂಬಂಧಪಟ್ಟಂತೆ ನೋಂದಾಯಿತ ಖರೀದಿ ಪತ್ರ ಮಾಡಿಕೊಟ್ಟಿದ್ದೇವೆ ಅಂದರೆ ಗಜಾನನ ಅಣ್ಣೀಕರ ಎನ್ನುವವರು ನಮಗೆ ಉಪ-ನೋಂದಣಾಧಿಕಾರಿ ಕಚೇರಿಯಲ್ಲಿ ಸಾಲದ ಬಗ್ಗೆ ದಾಖಲೆ ಮಾಡುವುದು ಇದೆ ಎಂದು ಸುಳ್ಳು ಹೇಳಿ ಕರೆದುಕೊಂಡು ಹೋಗಿದ್ದರು ಎಂದು ಸಾಕ್ಷಿಯು ಉತ್ತರಿಸುತ್ತಾರೆ.  ನನಗೆ ಹೆರಿಗೆಯಾಗಿದೆ ಎಂದು ಕಚೇರಿಗೆ ಹೋಗಲು ಆಗುವುದಿಲ್ಲವೆಂದು ತಿಳಿದು ನಾನು ಹಾಗೂ ನಮ್ಮ ತಮ್ಮ ರುದ್ರಗೌಡ ಮತ್ತು ನನ್ನ ಅತ್ತೆ ಬಸವ್ವ ಕುರಬಗಟ್ಟಿ ಎಲ್ಲರೂ ಕೂಡಿ ಮಾರುತಿ ಲಿಂಗಪ್ಪ ರಾಯ್ಕರ ರವರಿಗೆ ಜಿ ಪಿ ಎ ಮಾಡಿಕೊಟ್ಟಿದ್ದೆವು ಮತ್ತು ಖರೀದಿ ಪತ್ರ ಮಾಡಿಕೊಡಲು ಅಧಿಕಾರ ಪತ್ರ ನೀಡಿದ್ದೆವು ಎಂದರೆ ಸರಿಯಲ್ಲ.

**OS: 115-15** **PW-1**

ನಾವು ಎಲ್ಲಾ ವಾದಿಯರು ಮತ್ತು ಒಂದನೇ ಪ್ರತಿವಾದಿ ಮತ್ತು ಎರಡನೇ ಪ್ರತಿವಾದಿ ಕೂಡಿ 6 ನೇ ಪ್ರತಿವಾದಿಗೆ ನಿಪಿ.11 ರ ಪ್ರಕಾರ ಸ ನಂಃ 95/6 ರ ಜಮೀನಕ್ಕೆ ಸಂಬಂಧಪಟ್ಟಂತೆ ನೋಂದಾಯಿತ ಖರೀದಿ ಪತ್ರ ಮಾಡಿಕೊಟ್ಟಿದ್ದೇವೆ ಅಂದರೆ ಗಜಾನನ ಅಣ್ಣೇಕರ ಎನ್ನುವವರು ನಮಗೆ ಉಪ-ನೋಂದಣಾಧಿಕಾರಿ ಕಚೇರಿಯಲ್ಲಿ ಸಾಲದ ಬಗ್ಗೆ ದಾಖಲೆ ಮಾಡುವುದು ಇದೆ ಎಂದು ಸುಳ್ಳು ಹೇಳಿ ಕರೆದುಕೊಂಡು ಹೋಗಿದ್ದರು ಎಂದು ಸಾಕ್ಷಿಯು ಉತ್ತರಿಸುತ್ತಾರೆ. ನನಗೆ ಹೆರಿಗೆಯಾಗಿದೆ ಎಂದು ಕಚೇರಿಗೆ ಹೋಗಲು ಆಗುವುದಿಲ್ಲವೆಂದು ತಿಳಿದು ನಾನು ಹಾಗೂ ನಮ್ಮ ತಮ್ಮ ರುದ್ರಗೌಡ ಮತ್ತು ನನ್ನ ಅತ್ತೆ ಬಸವ್ವ ಕುರಬಗಟ್ಟಿ ಎಲ್ಲರೂ ಕೂಡಿ ಮಾರುತಿ ಲಿಂಗಪ್ಪ ರಾಯ್ಕರ ರವರಿಗೆ ಜಿ ಪಿ ಎ ಮಾಡಿಕೊಟ್ಟಿದ್ದೆವು ಮತ್ತು ಖರೀದಿ ಪತ್ರ ಮಾಡಿಕೊಡಲು ಅಧಿಕಾರ ಪತ್ರ ನೀಡಿದ್ದೆವು ಎಂದರೆ ಸರಿಯಲ್ಲ.

ಆ ಖರೀದಿ ಪತ್ರಗಳ ಅಡಿಯಲ್ಲಿ ಅಂದರೆ ನಿಪಿ.9 ರ ಅಡಿಯಲ್ಲಿ 4.50 ಲಕ್ಷ ರೂ., ನಿಪಿ.10 ರ ಅಡಿಯಲ್ಲಿ 6.00 ಲಕ್ಷ ಹಾಗೂ ನಿಪಿ.11 ರ ಅಡಿಯಲ್ಲಿ 4.50 ಲಕ್ಷ ರೂ.ಗಳನ್ನು ನಮೂದಿಸಿದ ಪ್ರತಿಫಲದ ಹಣವೆಂದು ಸ್ವೀಕರಿಸಿದ್ದೇವೆ ಅಂದರೆ ಸರಿಯಲ್ಲ. ಆ ಹಣವನ್ನು ನಾವು ಚೆಕ್ಕುಗಳ ಮೂಲಕ ಮತ್ತು ರೋಖ ರೂಪಾಯಿಗಳ ಮೂಲಕ ಸ್ವೀಕರಿಸಿದ್ದೇವೆ ಅಂದರೆ ಸರಿಯಲ್ಲ. ನಾವು ಒಟ್ಟು 16 ಜನ ಕೂಡಿ ಒಟ್ಟು 48 ಚೆಕ್ಕುಗಳ ಮುಖಾಂತರ ಹಣವನ್ನು ಪಡೆದಿದ್ದೇವೆ ಅಂದರೆ ಸಾಕ್ಷಿಯು ಗಜಾನನ ಅಣ್ಣೇಕರ ಮತ್ತು ನಮ್ಮ ದೊಡ್ಡಪ್ಪ ನಮ್ಮ ತಂದೆಯ ಪಾಸ್ ಪುಸ್ತಕವನ್ನು ತೆಗೆದುಕೊಂಡು ಹೋಗಿದ್ದರು ಆ ಕಾರಣ ಅದರ ಬಗ್ಗೆ ಅವರಿಗೆ ಗೊತ್ತು ಎಂದು ಹೇಳುತ್ತಾರೆ. ನಮ್ಮ ಪಾಸ್ ಪುಸ್ತಕವನ್ನು ಸಹ ಅವರು ತೆಗೆದುಕೊಂಡು ಹೋಗಿದ್ದರು. ಪ್ರತಿವಾದಿ 4 ರಿಂದ 6 ರವರು ಖರೀದಿ ಪತ್ರದಲ್ಲಿ ನಮೂದಿಸಿದ ಪ್ರತಿಫಲದ ಹಣವನ್ನು ನಮಗೆ ಕೊಟ್ಟಿದ್ದಾರೆ, ನಮ್ಮ ಖಾತೆಗಳಿಗೆ ಚೆಕ್ಕು ಮೂಲಕ ಜಮಾ ಮಾಡಿದ್ದಾರೆ, ನಾವು ಅದನ್ನು ಸ್ವೀಕರಿಸಿದ್ದೇವೆ, ಆದರೂ ಸಹಿತ ಈಗ ನ್ಯಾಯಾಲಯದ ಮುಂದೆ ನಮಗೆ ಹಣ ಮುಟ್ಟಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆ ಮುಕ್ತಾರನಾಮೆದಾರಕ ಅಣ್ಣೇಕರ ಇವರ ಮೇಲೆ ನಾವು ಕ್ರಿಮಿನಲ್ ಕೇಸ್ ಮಾಡಿದ್ದೇವೆ. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿದ್ದೇವೆ. ನಾವು ಆ ದಾಖಲೆಗಳನ್ನು ಹಾಜರಪಡಿಸಿಲ್ಲವೆಂದರೆ ಸರಿಯಲ್ಲ.

**OS: 115-15** **PW-1**

ಈ ಆಸ್ತಿಗಳ ಬಗ್ಗೆ ಖುರ್ಷಿದ್ ಅಂದರೆ 3 ನೇ ಪ್ರತಿವಾದಿಯ ಜೊತೆ ಮೊದಲಿನಿಂದ ದಾವೆ ಇತ್ತು. ನಾವು ಖುರ್ಷಿದ್ ಇವರ ಮೇಲೆ 2 – 3 ಕೇಸ್‌ಗಳು ಇದ್ದಿರಬಹುದು. ಆ ಕೇಸುಗಳಲ್ಲಿ ನಮಗೂ ಪಾರ್ಟಿ ಮಾಡಿ ಎಂದು, ನಾವು ಅರ್ಜಿ ಕೊಟ್ಟಿದ್ದೆವು ಆದರೆ ನಮ್ಮ ಅರ್ಜಿಗಳು ವಜಾ ಆಗಿದ್ದವು.

**ಮುಂದುವರೆದ ಪಾಟಿ ಸವಾಲಿಗೆ ಪ್ರತಿವಾದಿ 4 ರಿಂದ 6 ರ ಪರ ವಕೀಲರು**

**ಸಮಯ ಕೋರಿದರು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.